ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ರಾಸೇಯೋ:ಪಪೂಶಿ/228/2019-20

ನಿರ್ದೇಶಕರಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 04/10/2019

<u>**ಪ್ರಕಟಣೆ**</u>

ವಿಷಯ:- 2018-19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯನಿರ್ದೇಶಾಲಯ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ಉಲ್ಲೇಖನ: ಪಪೂಶಿಇ/ರಾಸೇಯೋ/02/2019-20 ದಿನಾಂಕ:26/09/2019

***

ಮೇಲ್ಕಂಡ ವಿಷಯ ಮತ್ತುಉಲ್ಲೇಖನಕ್ಕೆ ಸಂಬಂಧಿಸಿದಂತೆ 2018-19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯರಾಷ್ಟ್ರೀಯ ಪ್ರಶಸ್ತಿ /ನಿರ್ದೇಶನಾಲಯಪ್ರಶಸ್ತಿಗಾಗಿ ಎನ್.ಎಸ್.ಎಸ್ ಘಟಕಗಳುಳ್ಳ ಪದವಿ ಪೂರ್ವ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಕಾಲೇಜಿನ ಪ್ರಾಂಶುಪಾಲರು/ಕಾರ್ಯಕ್ರಮಾಧಿಕಾರಿಗಳು /ಸ್ವಯಂ ಸೇವಕರು-ಸ್ವಯಂಸೇವಕಿಯರು ನಿಗದಿತ ನಮೂನೆಗಳಲ್ಲಿ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಗಳನ್ನು ದಿನಾಂಕ 11/10/2019ರ ಒಳಗಾಗಿ ಕೇಂದ್ರಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012.ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ. ದಿನಾಂಕ 12/10/2019ರ ನಂತರ ಬರುವ ಮತ್ತುಅಪೂರ್ಣ ಮಾಹಿತಿಇರುವಯಾವುದೆ ಪ್ರಸ್ತಾವನೆಗಳನ್ನು ಪ್ರಶಸ್ತಿಗಳಿಗಾಗಿ ಪರಿಗಣಿಸಲಾಗುವುದಿಲ್ಲ.

ನಿರ್ದೇಶನಪ್ರಶಸ್ತಿಗಳಾದ ಅತ್ಯುತ್ತಮಘಟಕ, ಅತ್ಯುತ್ತಮಕಾರ್ಯಕ್ರಮಅಧಿಕಾರಿ ಮತ್ತುಅತ್ಯುತ್ತಮ ಸ್ವಯಂ ಸೇವಕ/ಸ್ವಯಂ ಸೇವಕಿಯರಆಯ್ಕೆಗಾಗಿ ದಿನಾಂಕ :11/10/2019 ರೊಳಗೆ ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ಸೂಚಿಸಿದೆ.

1. ನಿರ್ದೇಶನಾಲಯಒಂದೇರೀತಿಯ ಪ್ರಸ್ತಾವನೆಗಳಾದರೂ ಪ್ರತ್ಯೇಕ ಪ್ರಸ್ತಾವನೆಗಳನ್ನು ಸಲ್ಲಿಸಿ. ಪ್ರಸ್ತಾವನೆಯಾವ ಪ್ರಶಸ್ತಿಗೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.
2. ಕಾಲೇಜುಗಳ ಸ್ವಯಂ ಸೇವಕ/ಸೇವಕಿಯರ ಪ್ರಸ್ತಾವನೆ ಕಳುಹಿಸುವಾಗ ಎನ್.ಎಸ್.ಎಸ್. ನಲ್ಲಿ 2 ವರ್ಷ ಪೂರೈಸಿರುವ ವಿದ್ಯಾರ್ಥಿಗಳ ಪ್ರಸ್ತಾವನೆಗಳನ್ನು ಮಾತ್ರ ಕಳುಹಿಸಬೇಕು.
3. ಅತ್ಯುತ್ತಮಘಟಕ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂದರ್ಶನವನ್ನು ನಡೆಸಲಾಗುವುದು ಹಾಗೂ ಘಟಕಗಳಿಗೆ ಭೇಟಿ ನೀಡಿಕಾರ್ಯಯೋಜನೆಯನ್ನು ಪರಿಶೀಲಿಸಲಾಗುವುದು.
4. ಪ್ರಶಸ್ತಿಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಲು ನಿಗದಿತ ನಮೂನೆಗಳನ್ನು ಇಲಾಖೆಯ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ.
5. ಸ್ವಯಂ ಸೇವಕರು ಪ್ರಸ್ತಾವನೆಗಳೊಂದಿಗೆ ತಮ್ಮ ಭಾವಚಿತ್ರವನ್ನುಕಡ್ಡಾಯವಾಗಿ ಲಗತ್ತಿಸತಕ್ಕದ್ದು.
6. ಕಾಲೇಜುಗಳ ಪ್ರಸ್ತಾವನೆಗಳನ್ನು ಕಳುಹಿಸುವಾಗ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳ ಭಾವಚಿತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

7. ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಯಲ್ಲಿಚೆಕ್‌ಲಿಸ್ಟ್‌ನ್ನುಕಡ್ಡಾಯವಾಗಿ ಕಳುಹಿಸಬೇಕು. ಚೆಕ್‌ಲಿಸ್ಟ್‌ನ್ನು ಪ್ರತ್ಯೇಕವಾಗಿ ಕಳುಹಿಸಬೇಕು ಪ್ರಸ್ತಾವನೆಗೆ ಸೇರಿಸಬಾರದು.
8. ಪ್ರಸ್ತಾವನೆಯುಒಟ್ಟು 100 ಪುಟಗಳಿಗೆ ಮೀರದಂತೆ (ಛಾಯಾಚಿತ್ರಗಳನ್ನು ಒಳಗೊಂಡಂತೆ) ನೀಡುವುದು.
9. ಪ್ರಸ್ತಾವನೆಗಳನ್ನು ದಿನಾಂಕ 11/10/2019ರ ಒಳಗಾಗಿ ರಾಜ್ಯಸಂಯೋಜನಾಧಿಕಾರಿಗಳು, ಕೇಂದ್ರಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ಇಲ್ಲಿಗೆ ಮುದ್ದಾಂ ಆಗಿ ಅಥವಾ ನೋಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ.

ಪ್ರಸ್ತಾವನೆಗಳನ್ನು ಕಳುಹಿಸುವಾಗ ಮೇಲಿನ ನಿಬಂಧನೆಗಳನ್ನು ಅನುಸರಿಸಲಾಗಿದೆಯೇಎಂಬುದನ್ನು ಪ್ರಾಂಶುಪಾಲರು ಖಚಿತಪಡಿಸಿಕೊಂಡು ಪ್ರಸ್ತಾವನೆಗಳನ್ನು ಕಳುಹಿಸಬೇಕು. ಈ ಬಗ್ಗೆ ಯಾವುದೇ ಮಾಹಿತಿಅಗತ್ಯವಿದ್ದಲ್ಲಿರಾಜ್ಯಎನ್.ಎಸ್.ಎಸ್. ಅಧಿಕಾರಿಗಳು (ಶ್ರೀಮತಿಗಾಯಿತ್ರಿರೆಡ್ಡಿ ಮೊಬೈಲ್ ಸಂಖ್ಯೆ: 9845298166)ಸಂಪರ್ಕಿಸಬಹುದಾಗಿದೆ. ಪ್ರಾಂಶುಪಾಲರುಗಳು ಹೆಚ್ಚಿನ ಮುತುವರ್ಜಿ ವಹಿಸಿ ತಮ್ಮ ಕಾಲೇಜುಗಳಿಗೆ ಅತ್ಯುತ್ತಮಘಟಕ, ಯೋಜನಾಧಿಕಾರಿ, ಸ್ವಯಂ ಸೇವಕ/ಸ್ವಯಂ ಸೇವಕಿಯರಿಗೆ ಪ್ರಶಸ್ತಿ ಬರುವಂತೆ ಸಹಕರಿಸಲುಕೋರಲಾಗಿದೆ.

ವಿ.ಸೂ: 2019-20ನೇ ಸಾಲಿನ ವಿಶೇಷ ಶಿಬಿರವನ್ನು ಸದರಿಕಾಲೇಜಿನವರುಡಿಸೆಂಬರ್ ತಿಂಗಳ ಕೊನೆಯ ವರೆಗೂಮಾಡಲು, ಕೇಂದ್ರ ಸರ್ಕಾರದಆದೇಶದಂತೆವಿಸ್ತರಿಸಲಾಗಿದೆ.

ತಮ್ಮ ವಿಶ್ವಾಸಿ

Gayathri Reddy P.R.

(ಶ್ರೀಮತಿ ಗಾಯತ್ರಿರೆಡ್ಡಿ ಪಿ.ಆರ್)
ರಾಜ್ಯ ಸಂಯೋಜನಾಧಿಕಾರಿಗಳು
ರಾಷ್ಟ್ರೀಯಸೇವಾಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.

ಪ್ರತಿ:

1. ಸಂಬಂಧ ಪಟ್ಟಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು
2. ಸಹಾಯಕ ನಿರ್ದೇಶಕರು, ಇ ಗರ್ವನೆನ್ಸ್‌ರವರಿಗೆ ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.